ಎಂ ವಿ ಸಿ 1032/2022 ಪಿ.ಡಬ್ಲ್ಯೂ: 1

ಇಂದು ದಿಃ 17.07.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಎದುರದಾರರ ಪರ ಶ್ರೀ ಎಂ ಸಿ ಎಸ್ ವಕೀಲರಿಂದಃ

ಈಗ ನಾವು ಮನೆಯಲ್ಲಿ ನಾನು, ನನ್ನ ಇಬ್ಬರು ಮಕ್ಕಳು ಮತ್ತು ಮಾವ ವಾಸವಿದ್ದೇವೆ. ನಾವೆಲ್ಲ ಒಂದೇ ಕಡೆ ವಾಸವಾಗಿದ್ದೇವೆ ಎನ್ನುವ ಬಗ್ಗೆ ಜೀವಿತ ಸದಸ್ಯರ ಪಟ್ಟಿ ಮತ್ತು ರೇಷನ್ ಕಾರ್ಡ್ ಹಾಜರು ಮಾಡಿದ್ದೇವೆ. 3ನೇ ಅರ್ಜಿದಾರರಿಗೆ ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಾಗಿದ್ದಾಳೆ. ನನ್ನ ಮಗಳನ್ನು ಶಿವಪುರಕ್ಕೆ ಮದುವೆ ಮಾಡಲಾಗಿದೆ. ಈಗ ನಾವು ಮನೆಯಲ್ಲಿ ನಾನು ನನ್ನ ಮಗ ಮತ್ತು ಮಾವ ಮೂರೇ ಜನ ಇದ್ದೇವೆ. ಅಪಘಾತವಾದ ದಿನ ಮುತ್ತುಸ್ವಾಮಿ ಅವರು ಬೈಕ್ ಚಾಲನೆ ಮಾಡುತ್ತಿದ್ದರು ಎಂದು ತಿಳಿದುಕೊಂಡಿದ್ದೇನೆ. ಪುಟ್ಟಸ್ವಾಮಿಗೆ ಬೈಕ್ ಚಾಲನೆ ಮಾಡಲು ಪರವಾನಗಿ ಇಲ್ಲದ ಬಗ್ಗೆ ನನಗೆ ಗೊತ್ತಿಲ್ಲ. ಪುಟ್ಟಸ್ವಾಮಿಗೆ ಚಾಲನಾ ಪರವಾನಗಿ ಇಲ್ಲದೆ ಇರುವ ಕಾರಣ ಅಪಘಾತವಾಗಿದೆ ಎಂದರೆ ಗೊತ್ತಿಲ್ಲ. ಅಪಘಾತ ಪೂರ್ವದಲ್ಲಿ ನನ್ನ ಗಂಡ ಗಾರೆ ಕೆಲಸದಿಂದ 20 ಸಾವಿರ ಸಂಪಾದನೆ ಮಾಡುತ್ತಿದ್ದರು ಎಂದರೆ ಸುಳ್ಳು ಎಂದರೆ ಸರಿಯಲ್ಲ. ಅರ್ಜಿಯಲ್ಲಿ ನಾನು ಹೆಚ್ಚಿನ ಪರಿಹಾರ ಕೇಳಿರುವ ಕಾರಣ ಹೆಚ್ಚಿನ ಪರಿಹಾರ ಕೊಡಲು ಅರ್ಹಳಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.